

## ಕೃಷ್ಣನೊಂದಿಗೆ ಕಥಕ್ ನಂಟು

ಪೌರಾಣಿಕ ಹಿನ್ನೆಲೆಯನ್ನು ಅವಲೋಕಿಸಿದರೆ ಕಥಕ್ ನೃತ್ಯಕ್ಕೂ ಶ್ರೀಕೃಷ್ಣನಿಗೂ ಅವಿನಾಭಾವ ಸಂಬಂಧ. ಐದು ಸಾವಿರ ವರ್ಷಗಳಿಗೂ ಹಿಂದೆ ಶ್ರೀಕೃಷ್ಣ ಕಾಳಿಂಗ ಸರ್ಪದ ಹೆಡೆಯ ಮೇಲೆ ಥ, ಥೈ, ಥಟ್... ಮುಂತಾದ ಬೋಲ್‌ಗಳೊಂದಿಗೆ ನರ್ತಿಸಿದನಂತೆ. ಕೃಷ್ಣನ ಪಾದಗಳಿಂದ ಹೊಮ್ಮಿದ ಈ ಬೋಲ್‌ಗಳು ಕಥಕ್ ನೃತ್ಯ ಸಂಯೋಜನೆಯಲ್ಲಿ ಒಳಗೊಂಡಿವೆ ಎಂಬ ನಂಬಿಕೆಯೂ ಸೇರಿ ಕೃಷ್ಣನೊಂದಿಗೆ ಕಥಕ್ ನೃತ್ಯ ತಳಕು ಹಾಕಿಕೊಂಡಿದೆ ಎನ್ನುವುದು ನೃತ್ಯ ತಜ್ಞರ ಅಭಿಮತ.